**ಸಾಕ್ಷಿಗೆ ದಿನಾಂಕಃ29-11-2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**:: ಮುಂದುವರಿದ ಪಾಟೀ ಸವಾಲು :: ಆರೋಪಿ ಪರ ಶ್ರೀ.M.S ವಕೀಲರಿಂದ ::**

5. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ನಾನು ಆರೋಪಿತರಿಗೆ ದಿಃ 06-08-2013 ರಂದು ಸಾಲ ನೀಡಿರುವುದಾಗಿ ನಮೂದಿಸಿರುತ್ತೇನೆ ಎಂದರೆ ಸರಿ. ಸದರಿ ಮುಖ್ಯ ವಿಚಾರಣೆಯಲ್ಲಿ ಪ್ರಶ್ನಿತ ಚೆಕ್ ನಲ್ಲಿ ದಿಃ18-08-2018 ಎಂದು ನಮೂದಾಗಿರುತ್ತದೆ ಎಂದರೆ ಸರಿ. ದಿಃ06-08-2013 ರಿಂದ ದಿಃ18-08-2018 ರವರೆಗೂ ನಾನು ಆರೋಪಿತರಿಗೆ ಸದರಿ ಸಾಲದ ಹಣವನ್ನು ವಾಪಾಸ್ಸು ಮಾಡುವಂತೆ ಯಾವುದೇ ರೀತಿಯ ಲಿಖಿತ ರೂಪದಲ್ಲಿ ನೋಟೀಸನ್ನು ನೀಡಿರುವುದಿಲ್ಲ, ಎಂದರೆ ಸಾಕ್ಷಿಯು ನಾನು ಪೋನ್ ಕರೆ ಮುಖಾಂತರ ಹಣವನ್ನು ಹಿಂದಿರುಗಿಸುವಂತೆ ಕೇಳಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತರು ಸದರಿ ಹಣವನ್ನು ಹಿಂದಿರುಗಿಸುವಂತೆ ಯಾವುದಾದರೂ ಕಾನೂನು ಕ್ರಮ ಕೈಗೊಂಡಿರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು ಪೋನ್ ಕರೆ ಮಾಡಿ ಆರೋಪಿತರಿಗೆ ಸಾಲದ ಹಣವನ್ನು ಹಿಂದಿರುಗಿಸುವಂತೆ ಕೇಳಿಕೊಂಡ ವಿಚಾರವನ್ನು ನೋಟೀಸಿನಲ್ಲಾಗಲೀ, ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

6. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಆರೋಪಿತರಿಗೆ 20 ಲಕ್ಷ ರೂ. ಗಳನ್ನು ಸಾಲ ನೀಡಿದ್ದೆ ಎಂದು ನಮೂದಿಸಿದ್ದರೂ ಸಹ ಈ ಪ್ರಕರಣದ ಪ್ರಶ್ನಿತ ಚೆಕ್ 1 ಲಕ್ಷ ರೂ. ಗಳಿಗೆ ಮಾತ್ರ ಪಡೆದುಕೊಳ್ಳಲು ಕಾರಣವೇನು ಎಂದರೆ ಸಾಕ್ಷಿಯು ನಾನು ಮತ್ತೊಂದು ಪ್ರಕರಣ ಸಿ.ಸಿ ನಂಬರ್118/2019 ಸಹ ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಆ ಪ್ರಕರಣದಲ್ಲಿ ಪ್ರಶ್ನಿತ ಚೆಕ್ 10 ಲಕ್ಷ ರೂಗಳಿಗೆ ಅನಗದೀಕರಣಗೊಂಡಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಎರಡು ಚೆಕ್ ಗಳನ್ನು ಆರೋಪಿತರು ಭಾಗಶಃ ಸಾಲ ತೀರುವಳಿಗಾಗಿ ನೀಡಿದ್ದರು ಎಂದು ನುಡಿಯುತ್ತಾರೆ. ನಾನು 20 ಲಕ್ಷ ರೂ ಸಾಲದ ಹಣವನ್ನು ಆರೋಪಿತರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ. ಆರೋಪಿತರ ಬ್ಯಾಂಕ್ ಖಾತೆಗೆ 20 ಲಕ್ಷ-

ರೂ.ವರ್ಗಾವಣೆಯಾಗಿರುವ ಬಗ್ಗೆ ನೀವು ಯಾವ ದಾಖಲೆಯನ್ನು ಸಲ್ಲಿಸಿದ್ದೀರಾ ಎಂದರೆ ನನ್ನ ಬ್ಯಾಂಕ್ ಖಾತೆಯ ವಹಿಯನ್ನು ಸಲ್ಲಿಸಿರುವುದಾಗಿ ನುಡಿಯುತ್ತಾರೆ. ಸದರಿ ಸಾಲದ ವ್ಯವಹಾರದ ಕುರಿತಾಗಿ ಲಿಖಿತ ದಾಖಲೆಯನ್ನು ಮಾಡಿಕೊಂಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

7. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಈ ಪ್ರಕರಣದ ಆರೋಪಿತರಿಗೆ 2013 ನೇ ಇಸವಿಯಲ್ಲಿ 20 ಲಕ್ಷ ರೂ. ಗಳನ್ನು ಸಾಲ ನೀಡಿದ್ದೆ ಎಂದು ನಮೂದಿಸಿದ್ದರೂ ಸಹ ಈ ವರೆವಿಗೂ ಸದರಿ ಸಂಪೂರ್ಣ ಹಣದ ವಸೂಲಾತಿಗಾಗಿ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಎರಡು ಚೆಕ್ ಬೌನ್ಸ್ ಪ್ರಕರಣಗಳನ್ನು ಸಲ್ಲಿಸಿರುವುದನ್ನು ಹೊರತು ಪಡಿಸಿ ಬೇರೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

8. ನಾನು ಆರೋಪಿತರ ವಾಸಸ್ಥಳದ ಬಗ್ಗೆ ಯಾವುದೇ ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ. ಆರೋಪಿತರಿಗೆ ಹಣ ನೀಡಿದ ನಂತರ ನಾನು ಆರೋಪಿತರಿಂದ ಯಾವುದೇ ರಸೀದಿಯನ್ನು ಪಡೆದುಕೊಂಡಿರುವುದಿಲ್ಲ. ನಿಪಿ-5 ರಲ್ಲಿ ನಮೂದು ಮಾಡಿರುವ ವಿಳಾಸದಲ್ಲಿಯೇ ಆರೋಪಿತರು ವಾಸ ಇದ್ದಾರೆ ಎಂಬ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ಆರೋಪಿತರು ನಿಪಿ-5 ರಲ್ಲಿ ನಮೂದು ಮಾಡಿರುವ ವಿಳಾಸದಲ್ಲಿ ವಾಸ ಇರಲಿಲ್ಲ ಮತ್ತು ಆರೋಪಿತರು ಆ ಸಂದರ್ಭದಲ್ಲಿ ಮುಂಬೈನಲ್ಲಿ ವಾಸ ಇದ್ದರು ಎಂದರೆ ಗೊತ್ತಿಲ್ಲ.

9. ಆರೋಪಿತರು ಈ ನ್ಯಾಯಾಲಯದಲ್ಲಿ ಸಲ್ಲಿಸಿರುವ ದಾಖಲೆಗಳಲ್ಲಿ ತನ್ನ ವಿಳಾಸ ಮುಂಬೈ ಎಂದು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಆರೋಪಿತರ ವಿಳಾಸ ಮುಂಬೈ ಯಲ್ಲಿದೆ ಎಂದು ತಿಳಿದಿದ್ದರೂ ಸಹ ನಾನು ಆರೋಪಿತರ ಸಂಬಂಧಿಕರ ತಪ್ಪು ವಿಳಾಸಕ್ಕೆ ನಿಪಿ-5 ಅನ್ನು ಜಾರಿ ಮಾಡಲು ಮಾಹಿತಿ ನೀಡಿರುತ್ತೇನೆ ಎಂದರೆ ಸುಳ್ಳು. ಆರೋಪಿತರಿಗೆ ನ್ಯಾಯಾಲಯದಿಂದ ಜಾರಿಯಾದ ಸಮನ್ಸ್ ಖುದ್ದಾಗಿ ಜಾರಿಯಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರಿಗೆ ಈ ಪ್ರಕರಣದಲ್ಲಿ ನ್ಯಾಯಾಲಯದಿಂದ ಜಾರಿಯಾದ

ಸಮನ್ಸ್ ಅವರ ಸಂಬಂಧಿಕರಿಗೆ ಜಾರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹೆಂಡತಿ ಮತ್ತು ಈ ಪ್ರಕರಣದಲ್ಲಿನ ಆರೋಪಿತರಾದ ರೂಪಶ್ರೀ ನಡುವೆ ಯಾವುದೇ ವ್ಯವಹಾರ ನಡೆದ ಬಗ್ಗೆ ದಾಖಲೆ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ.

10. ಈಗ ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿರುವ ಸಪ್ಲೀಮೆಂಟ್ ಡೀಡ್ ದಿಃ01-10-2012 ರ ಧೃಡೀಕೃತ ಪ್ರತಿಯನ್ನು ತೋರಿಸಿ ಸದರಿ ದಾಖಲೆಯಲ್ಲಿ ಹಣಕಾಸಿನ ವ್ಯವಹಾರ ನನ್ನ ಮತ್ತು ಆರೋಪಿತೆಯ ತಾಯಿಯ ನಡುವೆ ನಡೆದಿರುವ ಬಗ್ಗೆ ನಮೂದಾಗಿರುವುದಿಲ್ಲ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿರುವುದರಿಂದ ಅದನ್ನು ನಿಡಿ -1 ಎಂದು ಗುರುತಿಸಲಾಯಿತು. ನಿಡಿ-1 ಹಕ್ಕು ನಿವೃತ್ತಿ ಪತ್ರ ಆಗಿರುತ್ತದೆ ಎಂದರೆ ಸರಿ. ನಾನು ಸದರಿ ನಿಡಿ-1 ಅನ್ನು ದಾಖಲು ಮಾಡುವ ಸಂದರ್ಭದಲ್ಲಿ ಆರೋಪಿತೆಯ ತಾಯಿಗೆ ಯಾವುದೇ ಹಣವನ್ನು ನೀಡದೇ ಇದ್ದುದ್ದರಿಂದ ಪ್ರಕರಣದಲ್ಲಿ ಹೇಳಲಾದ ಹಣವನ್ನು ಆರೋಪಿತರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿದ್ದೇನೆ ಎಂದರೆ ಸರಿಯಲ್ಲ.

11. ನಿಡಿ-1 ಹಕ್ಕು ನಿವೃತ್ತಿ ಪತ್ರ ತಯಾರಿಸಿ ತನ್ಮೂಲಕ ಸ್ಟಾಂಪ್ ಡ್ಯೂಟಿ ಪಾವತಿಸುವುದನ್ನು ಉಳಿಸುವ ಸಲುವಾಗಿ ಸದರಿ ನಿಡಿ-1 ರ ಪ್ರಕಾರ ನನ್ನ ಮತ್ತು ಇತರರ ಹೆಸರಿಗೆ ಷೆಡ್ಯೂಲ್ ಆಸ್ತಿಯನ್ನು ಆರೋಪಿತೆಯ ತಾಯಿಯಾದ ಲಲಿತಮ್ಮ ರವರಿಂದ ಹಕ್ಕು ನಿವೃತ್ತಿ ಪತ್ರ ಬರೆಸಿಕೊಂಡು ತದನಂತರ ನಾನು ಆರೋಪಿತೆಯ ಬ್ಯಾಂಕ್ ಖಾತೆಗೆ ಆಸ್ತಿಯ ಬಾಬ್ತು 20 ಲಕ್ಷ ರೂ. ಗಳನ್ನು ವರ್ಗಾವಣೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-1 ದಾಖಲೆಗೆ 475/- ಸ್ಟಾಂಪ್ ಶುಲ್ಕವನ್ನು ಪಾವತಿ ಮಾಡಲಾಗಿರುತ್ತದೆ. ನಿಡಿ-1 ರಲ್ಲಿ ನಮೂದಿಸಿರುವ ಷೆಡ್ಯೂಲ್ ಆಸ್ತಿ ಮಾರುಕಟ್ಟೆಯ ಬೆಲೆ ಕೋಟ್ಯಾಂತರ ರೂ. ಆಗಿರುತ್ತದೆ ಎಂದರೆ ಸರಿಯಲ್ಲ.

12. ಸದರಿ ನಿಡಿ-1 ಅನ್ನು ನೊಂದಣಿ ಮಾಡಿಸುವ ಸಂದರ್ಭದಲ್ಲಿ ಆರೋಪಿತೆಯ ಗಂಡನಾದ ಅಮರ್ ನಾಥ್ ರವರಿಂದ ಕೆ.ವೈ.ಸಿ ಗಾಗಿ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಪ್ರಶ್ನಿತ ಚೆಕ್ ಬ್ಯಾಂಕ್ ನವರು ಆರೋಪಿತರಿಗೆ ದಿಃ29-10-2012 ನೇ ಇಸವಿಯಲ್ಲಿ ನೀಡಿರುವ ಚೆಕ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರಶ್ನಿತ ಚೆಕ್ ಅನ್ನು 2018 ನೇ ಇಸವಿಯಲ್ಲಿ ಆರೋಪಿತರು ನನಗೆ ನೀಡಿದ್ದರ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಿಡಿ-1 ದಾಖಲೆಯನ್ನು 2012 ನೇ ಇಸವಿಯಲ್ಲಿ ನೊಂದಣಿ ಮಾಡಲಾಗಿರುತ್ತದೆ ಮತ್ತು ಪ್ರಶ್ನಿತ ಚೆಕ್ ಸಹ 2012 ನೇ ಇಸವಿಯಲ್ಲಿ ಬ್ಯಾಂಕ್ ನವರು ಆರೋಪಿತರಿಗೆ ನೀಡಿದ್ದ ಚೆಕ್ ಗಳಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು, ಆರೋಪಿತರು ಪ್ರಶ್ನಿತ ಚೆಕ್ ಅನ್ನು ನನಗೆ 2018 ನೇ ಇಸವಿಯಲ್ಲಿ ನೀಡಿದ್ದರು ಎಂದು ನುಡಿಯುತ್ತಾರೆ.

13. ಪ್ರಶ್ನಿತ ಚೆಕ್ ಅನ್ನು ಆರೋಪಿತರು 2018 ನೇ ಇಸವಿಯಲ್ಲಿ ಯಾವುದೇ ಸಾಲದ ಹಣವನ್ನು ಅಥವಾ ಭಾಗಶಃ ಸಾಲದ ಹಣವನ್ನು ಮರುಪಾವತಿ ಮಾಡಲು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-12 ಮತ್ತು ನಿಪಿ-13 ರ ದಾಖಲೆಯಲ್ಲಿ ದಿಃ06-08-2013 ರಂದು ಈ ಪ್ರಕರಣದಲ್ಲಿನ ಆರೋಪಿತರಿಗೆ 10 ಲಕ್ಷ ರೂ. ಸಂದಾಯ ಆಗಿರುವ ಬಗ್ಗೆ ದಾಖಲಾಗಿರುತ್ತದೆ. ಸದರಿ ನಿಪಿ-12 ಮತ್ತು ನಿಪಿ-13 ರ ದಾಖಲೆಯಲ್ಲಿ ಈ ಪ್ರಕರಣದಲ್ಲಿನ ಆರೋಪಿತರ ಬ್ಯಾಂಕ್ ಖಾತೆಗೆ ನಿಖರವಾಗಿ 5 ಲಕ್ಷದ 28 ರೂ. ಸಂದಾಯ ಆಗಿರುವ ಬಗ್ಗೆ ನಮೂದಾಗಿರುತ್ತದೆ ಎಂದರೆ ಸರಿ.

**(ಮುಂದುವರಿದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು) .

ಓ ಹೇ ಕೇ ಸರಿ ಇದೆ.

SD/-
ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಶೃಂಗೇರಿ.